ದೇಶದ ಯಾವುದೋ ಮೂಲೆಯಿಂದ ಇಲ್ಲಿಗೆ ಬಂದಿದ್ದೇವೆನ್ನುವ ನಿಲುವಿರುವಂತಿತ್ತು ಆ ಜನಗಳದ್ದು. ಇಂಥ ಜಾಗಗಳಲ್ಲೆಲ್ಲ ಪ್ರವಾಸಿಗರನ್ನು ಹೊತ್ತು ಸಂಚರಿಸುವ ವಾಹನಗಳ ಕಿಟಕಿಗೆ ಪಂಜರದಂತೆ ಸರಳುಗಳನ್ನು ಜೋಡಿಸಿರುವುದು ಒಳಗಿರುವವರ ರಕ್ಷಣೆಗೆಂದೋ ಅಥವಾ ಇವರಿಂದ ಹೊರಗಿನವರಿಗೆ ತೊಂದರೆ ಆಗಕೂಡದೆಂಬ ಉದ್ದೇಶಕ್ಕೋ ಎನ್ನುವ ಸಂಶಯ ಬಂತು ನನಗೆ.

ಪ್ರಾಣಿಗಳಿಗೆ ಹಣ್ಣು ತಿನ್ನಿಸುವುದು, ಬುಡಕಟ್ಟು ಜನರಿಗೆ ಆಹಾರ ನೀಡುವುದು ಇತ್ಯಾದಿ ವಿಷಯಗಳು ಒಂದೆಡೆಯಾಯಿತು. ಎಲ್ಲೆಲ್ಲೂ ವ್ಯಾಪಕವಾಗಿ ಕಾಣಸಿಗುವ ಮನುಷ್ಯನ ಸಾಕುಪ್ರಾಣಿಗಳ ಮೇಲಿನ ಮೋಹವನ್ನು ಯಾವ ನಿಟ್ಟಿನಿಂದ ನೋಡೋಣ? ಪ್ರೀತಿಯ ನಾಯಿಯನ್ನು ತನ್ನ ಮಂಚದಮೇಲೇ ಮಲಗಿಸಿಕೊಳ್ಳುವುದು, ಕಾರಿನಲ್ಲಿ ಕೂರಿಸಿ ತಾವು ಹೋಗುವಲ್ಲೆಲ್ಲ ಕರೆದುಕೊಂಡು ಹೋಗುವಂತಹ ಶೋಕಿಯ ಸಂಗತಿಗಳನ್ನು ಬದಿಗಿಡೋಣ; ಯಾರೋ ಒಬ್ಬ ಅದನ್ನು ಮನೆಯ ಸದಸ್ಯನಂತೆ ಪರಿಗಣಿಸುತ್ತೇನೆಂದು ಪ್ರಾಮಾಣಿಕವಾಗಿ ನಂಬಿಕೊಂಡಿದ್ದರೂ, ಅದರ ಹಿಂದಿರುವುದು ಮನುಷ್ಯನ ಸ್ವಾರ್ಥವೇ ತಾನೆ? ತನ್ನಾತ್ಮದ ಸುಖಕ್ಕಾಗಿಯೇ ತಾನೆ ಅದನ್ನವನು ಮಾಡುವುದು? ಇನ್ನೂ ತುಸು ಆಳಕ್ಕಿಳಿದು ನೋಡಿದರೆ, ಅಸಹಾಯಕ ಪ್ರಾಣಿಯೊಂದನ್ನು ಪಳಗಿಸಿ ತನ್ನ ಅಂಕೆಯಲ್ಲಿ ಇಟ್ಟುಕೊಳ್ಳುವ ಮಾನವ ದರ್ಪವೇ ಇಲ್ಲಿಯೂ ಯಾರ ಅರಿವಿಗೂ ಬಾರದೇ ಪ್ರವಹಿಸುತ್ತಿರುವುದು. ಪ್ರಾಣಿಗಳ ಕೊರಳಿಗೆ ಸರಪಳಿ ಕಟ್ಟಿಯೋ, ಪಂಜರದಲ್ಲಿ ಕೂಡಿ ಹಾಕಿಯೋ ಅದನ್ನು ಪ್ರೀತಿಸುವೆನೆನ್ನುವುದರಲ್ಲಿ ಮತ್ಯಾವ ನಿಸ್ವಾರ್ಥವಡಗಿರಲು ಸಾಧ್ಯ?

ಒಂದು ವಿಷಯವನ್ನು ನಾವು ಗಮನಿಸುವುದೊಳಿತು. ಈ ಭೂಮಿಯ ಮೇಲೆ ಯಾವುದೇ ಪ್ರಾಣಿಗೂ ಮನುಷ್ಯನ ಕರುಣೆಯ ಅಗತ್ಯವಿಲ್ಲ. 'ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲ ಅಡಿಗಡಿಗೆ ಆಹಾರವಿತ್ತವರು ಯಾರೋ, ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ ಅಲ್ಲಲ್ಲಿಗೆ ಆಹಾರವಿಡುವವರು ಯಾರೋ' ಎನ್ನುವ ದಾಸರ ಪದಕ್ಕೆ ಉತ್ತರ ಮನುಷ್ಯನಲ್ಲ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ' ಎನ್ನುವ ಗಾದೆ ಹಾಗೇ ಸುಮ್ಮನೆ ಹುಟ್ಟಿದ್ದಲ್ಲ.

***

ಮನುಷ್ಯ ಗಿಡಗಳನ್ನು ನೆಟ್ಟು ಬೆಳೆಸುವ ಹವ್ಯಾಸವನ್ನೂ ನಾವು ಇದೇ ತತ್ವದಡಿಯಲ್ಲಿ ಪರಾಮರ್ಶಿಸಬಹುದು. ಹಾಗೆ ನೋಡಿದರೆ, ಈ ಕೃಷಿ ಎನ್ನುವುದೇ ಪರಿಸರ ವಿರೋಧಿ ಪ್ರಕ್ರಿಯೆಗಳಲ್ಲೊಂದು. ನಾವಿಂದು ಅನೇಕ ಕಾರಣಗಳಿಂದಾಗಿ ಕೃಷಿಗೆ ಮಹತ್ತರ ಸ್ಥಾನವನ್ನು ನೀಡಿರುವುದು, ಅದಿಲ್ಲದೇ ಉಳಿಗಾಲವಿಲ್ಲದ ಅನಿವಾರ್ಯತೆಗೆ ನಮ್ಮನ್ನು ಒಡ್ಡಿಕೊಂಡಿರುವುದೇನೋ ನಿಜ. ಆದರೆ ಮೂಲಕ್ಕೆ ಹೋಗಿ ಶೋಧಿಸಿದಾಗ, ಮಾನವ ವಿಕಾಸದಲ್ಲಿ ಈ ಕೃಷಿಯೆಂಬುದು ಸಾವಯವವಾಗಿ ಒದಗಿಬಂದದ್ದಲ್ಲ ಎಂಬುದು ತಿಳಿಯುತ್ತದೆ. ಅಂದಮೇಲೆ, ಕುಂಡಗಳಲ್ಲಿ ಗಿಡ ಬೆಳೆಸುವುದು, ಕೈತೋಟ ಮಾಡುವುದು ಇವೆಲ್ಲವೂ ಕೂಡಾ ಸಹಜವಾದ, ಪ್ರಕೃತಿಗೆ ಪೂರಕವಾದ ಕ್ರಿಯೆಗಳು ಅನ್ನಿಸಿಕೊಳ್ಳುವುದಿಲ್ಲ. ಸಸಿಯೊಂದು ಬೇರೂರಬೇಕಾದ ಭೂಮಿಯನ್ನು ಗ್ರಾನೈಟ್ ಹಾಸಿನಿಂದ ಮುಚ್ಚಿ ಅದರ ಮೇಲೆ ಕುಂಡವನಿಟ್ಟು ಒಳಗೆ ಗಿಡ ಬೆಳೆಸುವುದರಲ್ಲಿ ಇರುವ ಹೆಗ್ಗಳಿಕೆಯಾದರೂ ಏನು?

ಹಾಗಾದರೆ ಮನೆಯಂಗಳದಲ್ಲಿ ಗಿಡ ಬೆಳೆಯುವ, ಒಳಾಂಗಣವನ್ನು ಹಸಿರಿನಿಂದ ಅಲಂಕರಿಸುವ ನಾಗರಿಕ ಜನರ ಸಸ್ಯಪ್ರೀತಿಗೆ ಕಾರಣ ಅವರ ಅಮಾಯಕತೆ ಇರಬಹುದೇ? ಅಥವಾ, ಈ ಭೂಮಿಯ ಮೇಲಿನ ನೈಸರ್ಗಿಕ ಸಂಗತಿಗಳು ನಶಿಸುತ್ತಿರುವುದಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಸಹಯೋಗವೂ ಇದೆ ಎಂಬ ತಪ್ಪಿತಸ್ಥ ಮನೋಭಾವ ಅಯಾಚಿತವಾಗಿ ಆತನ ಸೂಕ್ಷ್ಮಮತಿಯೊಳಗೆ ಬೆರೆತು, ಆ ಪಶ್ಚಾತ್ತಾಪವನ್ನು ಹೊರಹಾಕಲು ಕಂಡುಕೊಂಡ ಮಾರ್ಗವೇ ಇದು? ಇವೆರಡೂ ಕಾರಣಗಳನ್ನು ಹೊರತುಪಡಿಸಿ, ತನ್ನ ಮನಸ್ಸನ್ನು ಉಲ್ಲಸಿತಗೊಳಿಸುವುದಕ್ಕೋಸ್ಕರ, ಮನೆಯ ಆವರಣದ ಅಂದವನ್ನು ಹೆಚ್ಚಿಸುವುದಕ್ಕೋಸ್ಕರ ಸಸ್ಯವೊಂದನ್ನು ತನ್ನಾಣತಿಗೆ ತಕ್ಕಂತೆ ಬೆಳೆಸಿಕೊಳ್ಳುವುದರ ಹಿಂದೆ ಮನುಷ್ಯನ ಅಹಂಮ್ಮಿನ ಪೋಷಣೆಯೂ ಇರಬಹುದಲ್ಲವೇ?

***